<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**<u>F.D.P. No.35/2023. DW-3.</u>**

ದಿನಾಂಕಃ**03.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> ಅರ್ಜಿದಾರರ ಪರ ವಕೀಲರಿಂದಃ-

ನಾನು ಮತ್ತು ನಟೇಶ್ ಅನ್ಯೂನ್ಯವಾಗಿದ್ದೇವೆ ಎಂದರೆ ಸರಿ. ಮಲ್ಲೇಶಪ್ಪ ರವರು 2016 ರಲ್ಲಿ ಮೃತಪಟ್ಟಿದ್ದು ದಿನಂಕ ಗೊತ್ತಿಲ್ಲ. ವಿಲ್ ನಲ್ಲಿ ಯಾವ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಎಂದು ನಮೂದಿಸಿಲ್ಲ. ನಿಡಿ 1 ನ್ನು ಬೆಂಗಳೂರಿನ ಸಂಗಮೇಶ್ ಎಂಬುವವರ ಬಳಿ ಬರೆಸಲಾಗಿದೆ. ಸದರಿಯನ್ನು ಕೈಬರಹ ಮಾಡಿತ್ತೊ ಟೈಪ್ ಮಾಡಿತ್ತೊ ಎಂದು ಗೊತ್ತಿಲ್ಲ. ಸದರಿ ವಿಲ್ ಅನ್ನು ಮಲ್ಲೇಶಪ್ಪ ಮತ್ತು DW 2 ಮತ್ತು ನಾನು ಸೇರಿಕೊಂಡು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆಸ್ತಿ ಕೊಡಬಾರದು ಎಂದು ನಿಡಿ 1 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಸಂಗಮೇಶ್ ರವರ ಕಛೇರಿಯು ರಜಾಜಿನಗರದಲ್ಲಿ ಬರುತ್ತದೆ, ಆದರೆ ಅದರ ವಿಳಾಸ ಗೊತ್ತಿಲ್ಲ. ಅರ್ಜಿದಾರರು ಅವರ ತಂದೆಯ ಭಾಗದಲ್ಲಿಯೂ ಕೂಡ ತನಗೆ ಭಾಗ ಬರಬೇಕು ಎಂದು ಅರ್ಜಿ ಸಲ್ಲಿಸಿದ ನಂತರ ವಿಲ್ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಿಲ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲದಿದ್ದರು ಸಾಕ್ಷಿದಾರರಾಗಿ ಸಹಿ ಮಾಡಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.